ಓ. ಎಸ್. ನಂಃ 54 -2008

ಡಿ. ಡಬ್ಲ್ಯೂಃ 4

ದಿಃ 27 -06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ಎಸ್.ಎ. ವಾದಿ ಪರ ವಕೀಲರಿಂದ ಃ

ನನಗೆ ಇಬ್ಬರೂ ಅಣ್ಣ ತಮ್ಮಂದಿರು ಇರುತ್ತಾರೆ. ಅವರ ಹೆಸರು ಶಂಕರಗೌಡ ಮತ್ತು ನಾನು ಶಿವನಗೌಡ. ನನ್ನ ಘರಾಣೆಗೆ 40 ಎಕರೆ ಜಮೀನು ಇರುತ್ತದೆ. ನನಗೆ ಅದರ ಸರ್ವೇ ನಂಬರ್ ಹೇಳಲು ಬರುತ್ತದೆ. ಅದು ಶಿಂಗಾಪುರ ಗ್ರಾಮದಲ್ಲಿ ಇರುತ್ತದೆ. ಅದರ ಸರ್ವೇ ನಂ. 71 ರಲ್ಲಿ ಕ್ಷೇತ್ರ 18 ಎಕರೆ 22 ಗುಂಟೆ, ಸರ್ವೆ ನಂ. 72 ರ ಕ್ಷೇತ್ರ 22 ಎಕರೆ 27 ಗುಂಟೆ, ಸರ್ವೆ ನಂ.33/1 ರ ಕ್ಷೇತ್ರ 10 ಎಕರೆ 17 ಗುಂಟೆ, ಸರ್ವೆ ನಂ.50/2 ರ ಕ್ಷೇತ್ರ 02 ಎಕರೆ 36 ಗುಂಟೆ, ಸರ್ವೆ ನಂ.89/1 ರ ಕ್ಷೇತ್ರ 01 ಎಕರೆ 36 ಗುಂಟೆ, ಸರ್ವೆ ನಂ.82/1 ರ ಕ್ಷೇತ್ರ 1 ಎಕರೆ 32 ಗುಂಟೆ, ಸರ್ವೆ ನಂ. 82/1 ರ ಕ್ಷೇತ್ರ 02 ಎಕರೆ 16 ಗುಂಟೆ, ಸರ್ವೆ ನಂ.32/1 ರ ಕ್ಷೇತ್ರ 01 ಎಕರೆ 04 ಗುಂಟೆ, ಸರ್ವೆ ನಂ.32/4 ರ 01 ಎಕರೆ 04 ಗುಂಟೆ, ಸರ್ವೆ ನಂ.49/1 ರ ಕ್ಷೇತ್ರ 1 ಎಕರೆ ಇರುತ್ತದೆ. ಇವೆಲ್ಲಾ ಸರ್ವೆ ನಂಬರಗಳು ನಮ್ಮ ಘರಾಣೆಗೆ ಸೇರಿರುತ್ತವೆ. ಸದರ ಸರ್ವೇ ನಂಬರಗಳ ಉತಾರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಆಸ್ತಿಗಳು ನನ್ನ ಕಾಕಾ ಶೇಖರಗೌಡ ಮತ್ತು ವಗೈರೆ ರವರ ಹೆಸರಿನಲ್ಲಿ ಇದೆ. ಸದರಿ ಆಸ್ತಿಗಳನ್ನು ನಾವು ಸಾಗು ಮಾಡತ್ತಿದ್ದೇವೆ. ಇದು ಹೊರತು ಪಡಿಸಿ 08 ಗುಂಟೆ ಜಾಗದಲ್ಲಿ ಮನೆ ಇರುತ್ತದೆ. ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಮತ್ತು ಕೌಂಟರ್ ಕ್ಲೇಮ್ನಲ್ಲಿ ಸದರಿ ವಿಷಯವನ್ನು ಹೇಳಿರುತ್ತೇನೆ. ನಾನು ಸದರಿ ವಿಷಯವನ್ನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಮತ್ತು ಕೌಂಟರ್ ಕ್ಲೇಮ್ನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ಕೌಂಟರ್ ಕ್ಲೇಮ್ನಲ್ಲಿ ನಾನು ನನ್ನ ತಂದೆಯ ವಂಶಾವಳಿಯನ್ನು ಬರೆದಿರುತ್ತೇನೆ. ನಾನು ಯಾವುದೇ ವಂಶಾವಳಿಯನ್ನು ಬರೆದಿರುವುದಿಲ್ಲ ದಾವಾ ಆಸ್ತಿಯನ್ನು ನಾನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯು ಹಿರಿಯರ ಆಸ್ತಿ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಬಸನಗೌಡ ಮುರಿಗೆಪ್ಪ ಪಾಟೀಲರವರು ಈಗ ಜೀವಂತವಿಲ್ಲ. ಬಸನಗೌಡನಿಗೆ 03 ಜನ ಹೆಣ್ಣು ಮಕ್ಕಳು 03 ಜನ ಗಂಡು ಮಕ್ಕಳು ಇರುತ್ತಾರೆ. ಅವರ 03 ಗಂಡು ಮಕ್ಕಳ ಹೆಸರು ಮುರಿಗೆಪ್ಪ, ರಾಮನಗೌಡ ಮತ್ತ ಶೇಖರಗೌಡ ಇರುತ್ತದೆ. ಅವರ ಪೈಕಿ ಬರೆ ಶೇಖರಗೌಡರವರು ಜೀವಂತ ಇದ್ದಾರೆ. ಮುರಿಗೆಪ್ಪ ಮತ್ತು ರಾಮನಗೌಡರವರಿಗೆ ಮಕ್ಕಳು ಇರುತ್ತಾರೆ. ನಾನು ಬಸನಗೌಡರವರಿಗೆ 03 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ಹೇಳಿದ್ದು ಅವರ ಹೆಸರು ಪಕ್ಕೀರವ್ವ ಬಸನಗೌಡ ಪಾಟೀಲ, ಯಲ್ಲವ್ವ ಬಸನಗೌಡ ಪಾಟೀಲ ಮತ್ತು ಶಂಬವ್ವ ಬಸನಗೌಡ ಪಾಟೀಲ ಇರುತ್ತದೆ. ಅವರ ಪೈಕಿ ಒಬ್ಬರು ಯಲ್ಲವ್ವ ಮಾತ್ರ ಜೀವಂತ ಇದ್ದಾರೆ ಪಕ್ಕೀರವ್ವ ಮತ್ತು ಶಂಬವ್ವರವರ ಮಕ್ಕಳು ಇರುತ್ತಾರೆ. ನಾನು ಬಸನಗೌಡರವರ ಮಕ್ಕಳನ್ನು ಪಾರ್ಟಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ವಂಶಾವಳಿಯಲ್ಲಿ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜನರನ್ನು ಯಾಕೆ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸೇರಿಸಬೇಕಾಗಿತ್ತು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಅವರನ್ನು ಪಾರ್ಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸೇರಿಸಿರುವುದಿಲ್ಲ ಎಂದು ಮುಂದೆ ನುಡಿಯುತ್ತಾರೆ.

3. ಯಾವ ಆಧಾರದ ಮೇಲೆ ವಾದಿಯವರಿಗೆ ಹಕ್ಕು ಇಲ್ಲ ಎಂದು ನೀವು ಹೇಳಿರುವಿರಿ ಎಂದರೆ ಸಾಕ್ಷಿಯು ಅವರಿಗೆ ಹಕ್ಕು ಇರುತ್ತದೆ ನಾನು ಹೇಳಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಬರಿ ವಾದಿಯರಿಗೆ ಮಾತ್ರ ಹಕ್ಕು ಮತ್ತು ವಹಿವಾಟ ಇರುತ್ತದೆ ಎಂದರೆ ಸಾಕ್ಷಿಯು ನಮಗೂ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ವಾದಿಯವರಿಗೆ ಎಷ್ಟು ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು 02 ಆಸ್ತಿಗಳು ಸೇರಿ 11 ಎಕರೆ 14 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಈ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸಾಕ್ಷಿಯು

ನನಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದು ನುಡಿಯುತ್ತಾರೆ. ನಾನು ರೆವೆನ್ಯೂ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ಕೆಲವು ದಾವಾ ಆಸ್ತಿಗಳ ಕುರಿತು ಡ. ನಂ. ಹಾಗೂ ಆರ್. ಟಿ.ಸಿ.ಗಳನ್ನು ಹುಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಡ. ನಂ. ಮತ್ತು ಆರ್.ಟಿ.ಸಿ.ಗಳ ಮೇಲೆ ಅಪೀಲ್‌ನ್ನು ಸಲ್ಲಿಸಿರುವುದಿಲ್ಲ. ನೀವು ಯಾಕೆ ಅಪೀಲ್ ಹೋಗಿಲ್ಲ ಎಂದರೆ ಸಾಕ್ಷಿಯು ನಾನು ಸಣ್ಣವನಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಯಾಕೆ ಅಪೀಲ್ ಮಾಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಗೊತ್ತಾಗಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಂದೆಯವರು ನಮಗೆ ದಾವಾ ಆಸ್ತಿಯಲ್ಲಿ ಏನು ಹಕ್ಕು ಇಲ್ಲ ಎಂಬ ಕಾರಣಕ್ಕೆ ನಾವು ಅಪೀಲ್‌ನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರಗಳನ್ನು ಮತ್ತು ನಾನು ಹಾಜರುಪಡಿಸಿದ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರದಲ್ಲಿ ವಾದಿಯವರ ಹೆಸರು ಇದೆ ಎಂದರೆ ಸಾಕ್ಷಿಯು ಇದೆ ಅವರಿಗೆ ಸಂಬಂಧಿಸಿದಂತೆ ಆಸ್ತಿಗೆ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಇವತ್ತಿನವರೆಗೆ ವಾದಿಯವರ ಕಬ್ಜೆ ಹಾಗೂ ವಹಿವಾಟದಲ್ಲಿ ಇದೆ ಎಂದರೆ ಸಾಕ್ಷಿಯು ನಮಗೂ ಇದೆ ಎಂದು ನುಡಿಯುತ್ತಾರೆ. ನಾನು ನನ್ನ ಕೌಂಟರ್ ಕ್ಲೇಮ್ನಲ್ಲಿ ಬರೆದಿರುವ ಸಂಗತಿಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನ್ನ ಕಾಕಾ ಮತ್ತು ನಾನು ಕೌಂಟರ್ ಕ್ಲೇಮನ ಮಾಹಿತಿಯನ್ನು ನೀಡಿರುತ್ತೇವೆ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

Sd/-27-06-2022

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.